## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ **3372 / 2022**

**ಚಾಸಾ ಃ- 06 / ಪ್ರಾಸಾ ಃ- 06**

ದಿನಾಂಕಃ **23-12-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ಶ್ರೀ. LGG** ವಕೀಲರಿಂದ **ಆರೋಪಿಗಳ ಪರವಾಗಿ ಃ-**

ನೀವು ಮತ್ತು ನರಸೇಗೌಡ ರವರು ಒಂದೇ ಊರಿನವರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಪಂಚಾಯ್ತಿ ಸದಸ್ಯರಾಗಿದ್ದಿರಿ ಎಂದರೆ ಸಾಕ್ಷಿ ಇಲ್ಲ ಊರ ಯಜಮಾನ ಎಂದು ನುಡಿಯುತ್ತಾರೆ. ಚಾಸಾ-1 ಮತ್ತು 1 ನೇ ಆರೋಪಿಯವರ ವಿವಾಹದ ಸಂಬಂಧ ಮಾತುಕತೆ ಎಲ್ಲಿ ನಡೆದಿತ್ತು ಎಂದರೆ ಸಾಕ್ಷಿ ಬೆಂಗಳೂರಿನಲ್ಲಿರುವ ನರಸೇಗೌಡರವರ ಮನೆಯಲ್ಲಿ ಎಂದು ನುಡಿಯುತ್ತಾರೆ. ಯಾರು ಯಾರು ಮಾತುಕತೆಯಲ್ಲಿ ಇದ್ದರು ಎಂದರೆ ಸಾಕ್ಷಿ ನರಸೇಗೌಡ, ಮೂರ್ತಿ, ನಾನು ಮತ್ತು ಕೃಷ್ಣ ಮತ್ತು ಆರೋಪಿ ಕಡೆಯವರು ಎಂದು ನುಡಿಯುತ್ತಾರೆ. ಮದುವೆಯ ಮಾತುಕತೆ ಸಂಬಂಧ ನೀವು ಆರೋಪಿಗಳ ಮನೆಗೆ ಹೋಗಿದ್ದಿರಲಿಲ್ಲ ಎಂದರೆ ಸಾಕ್ಷಿ ಹೋಗಿದ್ದೆನು ಎಂದು ನುಡಿಯುತ್ತಾರೆ. ಯಾವಾಗ ಹೋಗಿರುತ್ತೀರಿ ಎಂದರೆ ಸಾಕ್ಷಿ ಮದುವೆಯ 3-4 ತಿಂಗಳ ಮುಂಚೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

ಬೆಂಗಳೂರಿನಲ್ಲಿ ಮಾತುಕತೆಯ ಸಮಯದಲ್ಲಿ ಆರೋಪಿಗಳು ವರದಕ್ಷಿಣೆ ಏನಾದರೂ ಕೇಳಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ವಿಜೃಂಭಣೆಯಿಂದ ಮದುವೆ ಮಾಡಿಕೊಡುವಂತೆಯೂ ಸಹ ಕೇಳಿದ್ದಿರಲಿಲ್ಲ ಎಂದರೆ ಸಾಕ್ಷಿ ಮಾಡುತ್ತಿದ್ದೆವು ಆದರೆ ಆ ಸಮಯದಲ್ಲಿ ಚಾಸಾ-1 ರವರ ತಮ್ಮ ಮರಣಹೊಂದಿದ್ದರಿಂದ ಚುಂಚನಗಿರಿ ಮಠದಲ್ಲಿ ವಿವಾಹ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಮದುವೆ ಆದ ನಂತರ ಕೆಲವು ಬೆಳವಣಿಗೆಗಳು ನಡೆದಿರುತ್ತವೆ ಎಂದು ಹೇಳಿದ್ದು ಸದರಿ ವಿಷಯವನ್ನು ನಿಮಗೆ ಯಾರು

ಹೇಳಿದ್ದು ಎಂದರೆ ಸಾಕ್ಷಿ ನರಸೇಗೌಡ ಎಂದು ನುಡಿಯುತ್ತಾರೆ. ಚಾಸಾ-1 ಮತುತ 1 ನೇ ಆರೋಪಿಯ ನಡುವೆ ಗಲಾಟೆ ಆದ ಬಗ್ಗೆ ಹಾಗೂ 1 ನೇ ಆರೋಪಿ ಮತ್ತು ಚಾಸಾ-2 ರವರ ನಡುವೆ ಗಲಾಟೆ ಆದ ಬಗ್ಗೆಯೂ ಸಹ ನಿಮಗೆ ಚಾಸಾ-2 ರವರೇ ಹೇಳಿದ್ದು ಎಂದರೆ ಸಾಕ್ಷಿ ನನಗೆ ಗೊತ್ತಿತ್ತು ಎಂದು ನುಡಿಯುತ್ತಾರೆ. ಗಲಾಟೆ ನಡೆದ ಸಮಯದಲ್ಲಿ ನೀವು ಉಪಸ್ಥಿತಿರಿದ್ದಿದಿರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅಂದರೆ ಗಲಾಟೆ ಬಗ್ಗೆ ನಿಮಗೆ ಬೇರೆಯವರಿಂದ ಮಾಹಿತಿ ಸಿಕ್ಕಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಬೇರೆಯವರು ಕೊಟ್ಟ ಮಾಹಿತಿ ಮೇರೆಗೆ ನೀವು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತಿರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಗಲಾಟೆ ಆದ ನಂತರ ನೀವು ಚಾಸಾ-1 ಮತ್ತು 1 ನೇ ಆರೋಪಿಯನ್ನು ಒಂದು ಮಾಡಲು ಪ್ರಯತ್ನ ಪಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಿಚ್ಛೇಧನಕ್ಕಾಗಿ ಅರ್ಜಿ ಸಲ್ಲಿಸಿದ್ದು ಸಹ ನಿಮಗೆ ಯಾರು ಹೇಳಿದ್ದು ಎಂದರೆ ಸಾಕ್ಷಿ ಅದನ್ನೂ ಚಾಸಾ 2 ರವರೇ ಹೇಳಿದ್ದು ಎಂದು ನುಡಿಯುತ್ತಾರೆ. ವಿಚ್ಛೇಧನ ಆಗಿರುತ್ತದೆಯೋ ಅಥವಾ ವಜಾ ಆಗಿರುತ್ತದೆಯೋ ಎಂದು ಏನಾದರೂ ನಿಮಗೆ ಗೊತ್ತೆ ಎಂದರೆ ಸಾಕ್ಷಿ ವಿಚ್ಛೇಧನವಾಗಿರುತ್ತದೆ ಎಂದು ಚಾಸಾ-2 ರವರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-2 ರವರು ವಿಚ್ಛೇಧನವಾಗಿರುತ್ತದೆ ಎಂದು ನಿಮಗೆ ಹೇಳಿದ ಮೇರೆಗೆ ನೀವು ನ್ಯಾಯಾಲಯದಲ್ಲಿ ಸದರಿ ವಿಷಯವನ್ನು ಹೇಳುತ್ತಿದ್ದೀರಿ ಎಂದರೆ ಸಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮಗೆ ಮದುವೆ ಹಾಗೂ ಮಾತುಕತೆಯ ವಿಚಾರದ ಸಂಬಂಧ ಯಾವುದೇ ವಿಷಯ ಗೊತ್ತಿರುವುದಿಲ್ಲ ಚಾಸಾ-2 ರವರ ಮಾತನ್ನು ಕೇಳಿ ನೀವು ನ್ಯಾಯಾಲಯದಲ್ಲಿ ಸುಳ್ಳು ಹೇಳಿಕೆಯನ್ನು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ನನಗೆ ಎಲ್ಲಾ ವಿಚಾರಗಳು ಗೊತ್ತು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ. ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.ಮಾಗಡಿ.**